4) ಸಮರ್ಪಕ ವಿದ್ಯುತ್ ಸರಬರಾಜಿಗಾಗಿ ಮೇಲೆ ತಿಳಿಸಿದಂತೆ ವಿದ್ಯುತ್ ಉತ್ಪಾದನೆಯ ಜೊತೆಗೆ ಅನೇಕ ವ್ಯವಸ್ಥೆ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಈ ದಿಸೆಯಲ್ಲಿ ನಿಗಮವು ಮುಂದಿನ ಹತ್ತು ವರ್ಷಗಳಿಗೆ ತೆಗೆದುಕೊಳ್ಳಬೇಕಾದ ಒಂದು ಸಮಗ್ರ ಯೋಜನೆಯನ್ನು ರೂಪಿಸುತ್ತಿದ್ದು, ಇದಕ್ಕೆ ಸುಮಾರು 13,567 ಕೋಟಿ ರೂ.ಗಳ ವೆಚ್ಚವು ತಗಲುವುದೆಂದು ಅಂದಾಜು ಮಾಡಲಾಗಿದೆ.

5) ಮೇಲೆ ತಿಳಿಸಿದಂತೆ ನಿಗಮವು ಮುಂದಿನ ಹತ್ತು ವರ್ಷಗಳಲ್ಲಿ ಅನೇಕ ವ್ಯವಸ್ಥೆ ಸುಧಾರಣಾ ಕಾರ್ಯಕ್ರಮಗಳನ್ನು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಹಂತಹಂತವಾಗಿ ಹಣಕಾಸಿನ ಲಭ್ಯತೆಯನ್ನು ಅನುಸರಿಸಿ ರಾಜ್ಯದಲ್ಲಿ ಕೈಗೊಳ್ಳುವುದರಿಂದ ಸಮರ್ಪಕ ವಿದ್ಯುತ್ ಸರಬರಾಜನ್ನು ನೀಡುವ ಪರಿಸ್ಥಿತಿಯನ್ನು ಮುಟ್ಟಬಹುದೆಂದು ನಿರೀಕ್ಷಿಸಲಾಗಿದೆ.

ಮುಖ್ಯಮಂತ್ರಿಗಳ ಜನತಾ ದರ್ಶನಾ ಕಾರ್ಯಕ್ರಮ:

68 (410) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಮುಖ್ಯಮಂತ್ರಿಗಳ ಜನತಾದರ್ಶನ ಕಾರ್ಯಕ್ರಮ ಯಾವಾಗ ಪ್ರಾರಂಭವಾಯಿತು;

2) ಈ ಕಾರ್ಯಕ್ರಮದಡಿ ಇಲ್ಲಿಯವರೆಗೆ ಬಂದ ಅರ್ಜಿಗಳು: ಮನವಿಗಳು ಎಷ್ಟು;

3) ಜನತಾದರ್ಶನದಲ್ಲಿ ತಪ್ಪು ಮಾಹಿತಿ ನೀಡಿ ಸಲ್ಲಿಸಿರುವ ದೂರುಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

4) ಜನತಾದರ್ಶನ ಕಾರ್ಯಕ್ರಮವನ್ನು ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ನಡೆಸಲು ಸರ್ಕಾರ ಆಲೋಚಿಸುತ್ತಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ)

1) ದಿನಾಂಕ: 11-11-1999 ರಿಂದ ಪ್ರಾರಂಭಿಸಲಾಯಿತು. ಪೂರ್ಣ ಪ್ರಮಾಣದಲ್ಲಿ 2001ರ ಜನವರಿ ಮಾಹೆಯಲ್ಲಿ ಪುನಃ ಆರಂಭಿಸಲಾಯಿತು (08-1-2001).

2) ಇತ್ತೀಚಿನ ಸಂದರ್ಶನಗಳಲ್ಲಿ ಸ್ವೀಕರಿಸಲಾದವು 1468 (ದಿನಾಂಕ: 14-2-2001ರ ವರೆಗೆ).

3) ತಪ್ಪು ಮಾಹಿತಿ ನೀಡಿ ದೂರು ಸಲ್ಲಿಸಿರುವ ಬಗ್ಗೆ ಗಮನಕ್ಕೆ ಬಂದಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

4) ಪರಿಶೀಲನೆಯಲ್ಲಿದೆ.

ವಿದ್ಯುತ್ ಖರೀದಿ ಒಪ್ಪಂದದಲ್ಲಿ ಆಗಿದೆ ಎನ್ನಲಾದ ಭ್ರಷ್ಟಾಚಾರ:

69 (411) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಯಾವ ಯಾವ ವಿದ್ಯುತ್ ಉತ್ಪಾದನಾ ಸಂಸ್ಥೆಗಳ ಜೊತೆ ಸರ್ಕಾರ ವಿದ್ಯುತ್ ಖರೀದಿಸಲು ಒಪ್ಪಂದ ಮಾಡಿಕೊಂಡಿದೆ;

2) ಈ ಸಂಸ್ಥೆಗಳೊಡನೆ ಮಾಡಿಕೊಂಡ ಒಪ್ಪಂದವನ್ನು ಪುನರ್ ವಿಮರ್ಶಿಸಿ ವಿದ್ಯುತ್ ಖರೀದಿ ದರವನ್ನು ಹೆಚ್ಚಿಸಲಾಗಿದೆಯೇ;

3) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು;

4) ಇದರಲ್ಲಿ ಅವ್ಯವಹಾರವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

5) ಹಾಗಿದ್ದಲ್ಲಿ ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ರಾಜ್ಯದಲ್ಲಿ ಕೆಳಕಂಡ ಖಾಸಗೀ ಕ್ಷೇತ್ರದಲ್ಲಿ ವಿದ್ಯುತ್ ಯೋಜನೆಗಳನ್ನು ಅಭಿವೃದ್ಧಿ ಪಡಿಸುತ್ತಿರುವ ಖಾಸಗೀ ಕಂಪನಿಗಳ ಜೊತೆ ವಿದ್ಯುತ್ ಖರೀದಿ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ.

ಅ) ಸ್ಪರ್ಧಾತ್ಮಕ 'ಬಿಡ್' ಮಾರ್ಗದ ಯೋಜನೆಗಳು:

1) ಡಿಎಲ್ಎಫ್ ಪವರ್ ಲಿಮಿಟೆಡ್- ತುಮಕೂರು

2) ಟಾಟಾ ಎಲೆಕ್ಟ್ರಿಕ್ ಪವರ್ ಕಂಪನಿ - ಬೆಳಗಾಂ.

3) ಸಿನ್ಟಿಲಾ ಪವರ್ ಲಿಮಿಟೆಡ್ - ವೈಟ್ಫೀಲ್ಡ್

4) ಶ್ರೀ ರಾಯಲ್ ಸೀಮಾ ಆಲ್ಕ್ಲೀಸ್
ಅಂಡ್ ಆಲಾಯ್ಡ್ ಕೆಮಿಕಲ್ಸ್ ಲಿಮಿಟೆಡ್ - ಬಳ್ಳಾರಿ.

5) ಅಟ್ರಿಯಾ ಪವರ್ ಕಾರ್ಪೋರೇಷನ್- ಹರಿಹರ.

6) ಭಾರತ್ ಫೋರ್ಜ್ ಲಿಮಿಟೆಡ್ - ಕೊಪ್ಪಳ.

ಆ) ಬಾರ್ಜ್ ಮಾಂಟೆಂಡ್ ಯೋಜನೆಗಳು:

1) ತಣ್ಣೀರು ಬಾವಿ ಪವರ್ ಕಂಪನಿ ಪ್ರೈವೇಟ್ ಲಿಮಿಟೆಡ್ -ಮಂಗಳೂರು.

2) ಸ್ಮಿತ್ ಕೋ-ಜನರೇಷನ್ ಇಂಡಿಯಾ ಲಿಮಿಟೆಡ್- ಮಂಗಳೂರು.

3) ಯೂರೋ ಇಂಡಿಯಾ ಪವರ್ ಕೆನರಾ ಪ್ರೈವೇಟ್ ಲಿ. - ಮಂಗಳೂರು.

ಇ) ಎಮ್ಓಯು: ಸರ್ಕಾರಿ ಆದೇಶಗಳ ಮಾರ್ಗದ ಯೋಜನೆಗಳು:

1) ಹಾಸನ ಪವರ್ ಸಪ್ಲೈ ಕಂಪನಿ - ಹಾಸನ.

2) ಇಂಡಿಯಾ ಪವರ್ ಪಾರ್ಟ್ನರ್ಸ್ - ಮಂಡ್ಯ.

3) ಪೀಣ್ಯ ಪವರ್ ಕಂಪನಿ - ಕಣ್ಮಿಣಿಕೆ.

4) ಮಂಗಳೂರು ಪವರ್ ಕಂಪನಿ - ನಂದಿಕೂರು (ಮಂಗಳೂರು).

ಈ) ಅಸಂಪ್ರದಾಯಕ ಶಕ್ತಿ ಮೂಲಗಳು:

1) ಗ್ಲೋಬಲ್ ಎನರ್ಜಿ ಲಿಮಿಟೆಡ್ - ಬೆಳಗಾಂ.

2) ಇಲ್ಲ. ಈ ಸಂಸ್ಥೆಗಳೊಡನೆ ಒಪ್ಪಂದ ಮಾಡಿಕೊಂಡಿರುವ ವಿದ್ಯುತ್ ಖರೀದಿ ದರಗಳಲ್ಲಿ ಯಾವುದೇ ಪರಿಷ್ಕರಣೆಯನ್ನು ಮಾಡಿರುವುದಿಲ್ಲ. ಅಲ್ಲದೇ, ಸಹಿ ಹಾಕಲ್ಪಟ್ಟಿರುವ ವಿದ್ಯುತ್ ಖರೀದಿ ಒಪ್ಪಂದಗಳನ್ನು ಪುನರ್ ವಿಮರ್ಶೆಗೆ ಒಳಪಡಿಸಿರುವುದಿಲ್ಲ.

3) ಉದ್ಭವಿಸುವುದಿಲ್ಲ.

4) ಇಲ್ಲ.

5) ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಸೀಮೆಎಣ್ಣೆ ಕೂಪನ್ ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದು:

70 (412) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಂಗಳೂರು ನಗರದಲ್ಲಿ ಸೀಮೆಎಣ್ಣೆ ಕೂಪನ್ ವಿತರಣೆ ಪೂರ್ಣಗೊಂಡಿದೆಯೇ;

2) ಇಲ್ಲಿಯವರೆಗೆ ಎಷ್ಟು ಕಾರ್ಡುದಾರರಿಗೆ ಕೂಪನ್‌ಗಳನ್ನು ವಿತರಿಸಲಾಗಿದೆ;

3) ನ್ಯಾಯಬೆಲೆ ಅಂಗಡಿಗಳಲ್ಲಿ ಬೋಗಸ್ ಕಾರ್ಡುಗಳ ಮೂಲಕ ಸೀಮೆಎಣ್ಣೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

4) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

5) ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಕಾರ್ಡುದಾರರಿಗೆ ಸೀಮೆಎಣ್ಣೆ ಕೂಪನ್‌ಗಳನ್ನು ಈಗಾಗಲೇ ವಿತರಿಸಲಾಗಿದೆ?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)

1) 2001ರ ಫೆಬ್ರವರಿ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ.

2) 6,89,439.

3) - ಇಲ್ಲ -

4) 'ಇ' ದ ಉತ್ತರದಿಂದ ಉದ್ಭವಿಸುವುದಿಲ್ಲ.

5) ವಿಧಾನಸಭಾ ಕ್ಷೇತ್ರವಾರು ಮಾಹಿತಿ ಲಭ್ಯವಿರುವುದಿಲ್ಲ.